## ಕರ್ನಾಟಕ ಸರ್ಕಾರ

## ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗ,

ಸಂಖ್ಯೆ: ಸಚುಆ/ಅ.ಸೂ-1/2013.

ಕೊಠಡಿ ಸಂಖ್ಯೆ: 243, 2ನೇ ಅಂತಸ್ತು
ವಿಧಾನ ಸೌಧ, ಡಾ.ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 18.04.2013.

## ಅಧಿಸೂಚನೆ

ವಿಷಯ: ಸಹಕಾರಿ ಸಂಸ್ಥೆಗಳ ಆಡಳಿತ ಮಂಡಳಿ ಹಾಗೂ ಪದಾಧಿಕಾರಿಗಳ ಚುನಾವಣೆ – ಸಹಕಾರ ಚುನಾವಣಾ ಆಯೋಗದ ರಚನೆ.

ಉಲ್ಲೇಖ: (1) ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಒ:20:ಸಿಎಲ್ಎಂ:2013, ಬೆಂಗಳೂರು, ದಿನಾಂಕ: 18.03.2013.

(2) ಸರ್ಕಾರದ ಅಧಿಸೂಚನೆ CO-21-CLM-2013, ಬೆಂಗಳೂರು ದಿನಾಂಕ: 08.04.2013.

ಕರ್ನಾಟಕ ರಾಜ್ಯದಲ್ಲಿನ ಸಹಕಾರ ಸಂಘಗಳ ಆಡಳಿತ ಮಂಡಳಿಗೆ ಈ ಹಿಂದೆ ಚುನಾವಣೆಯನ್ನು ಸಹಕಾರ ಸಂಘಗಳ ನಿಬಂಧಕರ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಡೆಸಲಾಗುತ್ತಿತ್ತು ಎಂಬ ವಿಷಯ ಸಹಕಾರ ಇಲಾಖಾ ಅಧಿಕಾರಿಗಳಿಗೆ ಹಾಗೂ ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಗೆ ಗೊತ್ತಿರುವ ವಿಷಯವೇ ಆಗಿದೆ. ಸಹಕಾರ ಸಂಸ್ಥೆಗಳ ಆಡಳಿತ ಸಮಿತಿಯು ಚುನಾವಣಾ ದಿನಾಂಕ ನಿಗದಿ ಪಡಿಸುವ ಅಧಿಕಾರ ಹೊಂದಿತ್ತು. ವ್ಯಾಪ್ತಿಯ ಸಹಕಾರ ಸಂಘಗಳ ನಿಬಂಧಕರು ಚುನಾವಣಾಧಿಕಾರಿಗಳನ್ನು ನೇಮಿಸುತ್ತಿದ್ದರು ಹಾಗೂ ಆ ರೀತಿ ನೇಮಿಸಲಾದ ಚುನಾವಣಾಧಿಕಾರಿಯು ಸಂಬಂಧಿಸಿದ ಸಂಘದ ಚುನಾವಣಾ ವೇಳಾ ಪಟ್ಟಿಯನ್ನು ಪ್ರಕಟಿಸಿ, ಅದರಂತೆ ಚುನಾವಣೆಯನ್ನು ನಡೆಸಿ, ಆಡಳಿತ ಸಮಿತಿಗೆ ಸದಸ್ಯರನ್ನು ಚುನಾಯಿಸುವುದು ಪದ್ಧತಿಯಾಗಿತ್ತು.

ಸಹಕಾರ ಸಂಸ್ಥೆಗಳ ಆಡಳಿತ ಮಂಡಳಿಗೆ ಚುನಾವಣೆಯನ್ನು ಮುಕ್ತ, ನ್ಯಾಯೋಚಿತ ಹಾಗೂ ಪಾರದರ್ಶಕತೆಯಿಂದ ನಡೆಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2012ರಂತೆ ಪ್ರಕರಣ 39 'ಎ' ಗೆ ತಿದ್ದುಪಡಿಯನ್ನು (ಕರ್ನಾಟಕ ಅಧಿನಿಯಮ ಸಂಖ್ಯೆ 3/2013) ತಂದಿದೆ. ಅಲ್ಲದೇ, ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 2012ರಂತೆ ಪ್ರಕರಣ ಸಂಖ್ಯೆ: 26ಕ್ಕೆ ತಿದ್ದುಪಡಿ ತಂದಿದ್ದು, ಪ್ರಕರಣ 26 'ಎ' ಹೊಸದಾಗಿ ಸೇರ್ಪಡೆಯಾಗಿದೆ. (2013ರ ಕರ್ನಾಟಕ ಅಧಿನಿಯಮ ಸಂಖ್ಯೆ 4) ಈ ಎರಡೂ ಅಧಿನಿಯಮಗಳಿಗೆ ತಂದ ತಿದ್ದುಪಡಿಗಳಿಗೆ ಕರ್ನಾಟಕ ರಾಜ್ಯದ ಘನತೆವೆತ್ತ ರಾಜ್ಯಪಾಲರು ಅನುಮೋದನೆಯನ್ನು ನೀಡಿರುತ್ತಾರೆ. ಈ ತಿದ್ದುಪಡಿಗಳು ದಿನಾಂಕ: 11.02.2013 ರಿಂದ ಜಾರಿಗೆ ಬರುವಂತೆ ಕರ್ನಾಟಕ ಸರ್ಕಾರವು ಅಧಿಸೂಚನೆಯನ್ನು ಹೊರಡಿಸಿರುತ್ತದೆ.

ತಿದ್ದುಪಡಿಯಾದ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ರ ಪ್ರಕರಣ 39 'ಎ' ದಲ್ಲಿನ ಅವಕಾಶದಂತೆ ಇನ್ನು ಮುಂದೆ ಪ್ರತಿ ಸಹಕಾರ ಸಂಘದ ಆಡಳಿತ ಮಂಡಳಿಯ ಸಾಮಾನ್ಯ ಚುನಾವಣೆ ಹಾಗೂ ಪದಾಧಿಕಾರಿಗಳ ಚುನಾವಣೆಯು ಸಹಕಾರಿ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು ನಡೆಸತಕ್ಕದ್ದಾಗಿರುತ್ತದೆ. ಹೊಸದಾಗಿ ಸೇರ್ಪಡೆಗೊಂಡ ಅಧಿನಿಯಮ 39 'ಎಎ' ದಂತೆ ರಾಜ್ಯ ಸರ್ಕಾರವು ಸಹಕಾರ ಚುನಾವಣಾ ಆಯೋಗದ ರಚನೆ ಮಾಡಲು ಅಧಿಕಾರ ಹೊಂದಿರುತ್ತದೆ.

ಕರ್ನಾಟಕ ಸರ್ಕಾರವು ಉಲ್ಲೇಖಿತ ಅಧಿಸೂಚನೆಯಂತೆ ಸಹಕಾರ ಚುನಾವಣಾ ಆಯುಕ್ತರು ಹಾಗೂ ಕಾರ್ಯದರ್ಶಿಯನ್ನೊಳಗೊಂಡ ಸಹಕಾರ ಚುನಾವಣಾ ಆಯೋಗವನ್ನು ದಿನಾಂಕ: 18.03.2013 ರಂದು ಅಧಿಸೂಚನೆ ಹೊರಡಿಸುವ ಮೂಲಕ ಈಗಾಗಲೇ ರಚನೆ ಮಾಡಿರುತ್ತದೆ. ಉಲ್ಲೇಖ (2) ರ ಸರ್ಕಾರದ ಅಧಿಸೂಚನೆ ರೀತ್ಯಾ ಕರ್ನಾಟಕದ ಘನತೆವೆತ್ತ ರಾಜ್ಯಪಾಲರು, ಶ್ರೀ. ಎನ್. ಸಿ. ಮುನಿಯಪ್ಪ, ಐ.ಎ.ಎಸ್., ರವರನ್ನು ಸಹಕಾರ ಚುನಾವಣಾ ಆಯುಕ್ತರನ್ನಾಗಿ ನೇಮಕ ಮಾಡಿರುತ್ತಾರೆ. ಅದರಂತೆ, ಶ್ರೀ. ಎನ್. ಸಿ.

ಮುನಿಯಪ್ಪ, ಐ.ಎ.ಎಸ್., ರವರು ಕರ್ನಾಟಕ ರಾಜ್ಯದ ಸಹಕಾರ ಚುನಾವಣಾ ಆಯುಕ್ತರಾಗಿ ದಿನಾಂಕ: 12.04.2013ರಂದು ಅಧಿಕಾರ ವಹಿಸಿ ಕೊಂಡಿರುತ್ತಾರೆ.

**ಮೇಲ್ಕಂಡ** ಹಿನ್ನೆಲೆಯಲ್ಲಿ, ಸಹಕಾರ ಇಲಾಖಾಧಿಕಾರಿಗಳು / ಸಹಕಾರ ಸಂಸ್ಥೆಗಳು ಸಹಕಾರ **ಸಂಘಗಳ** ಅಧಿನಿಯಮಕ್ಕೆ ಇತ್ತೀಚಿಗೆ ಆಗಿರುವ ತಿದ್ದುಪಡಿಗಳನ್ನು ಗಮನದಲ್ಲಿಟ್ಟುಕೊಂಡು, ಅಧಿನಿಯಮಗಳಿಗೆ / ನಿಯಮಗಳಿಗೆ / ಬೈಲಾಗಳಿಗೆ ಅನುಗುಣವಾಗಿ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು ಮತ್ತು ಸಹಕಾರ ಚುನಾವಣಾ ಆಯೋಗವು ಆಗಾಗ್ಗೆ ನೀಡುವ ನಿರ್ದೇಶನಗಳನ್ನು ತಪ್ಪದೇ ಪಾಲಿಸುವಂತೆ ಸೂಚಿಸಿದೆ.

**(ಎನ್. ಸಿ. ಮುನಿಯಪ್ಪ)**
ಸಹಕಾರ ಚುನಾವಣಾ ಆಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.

**ಇವರಿಗೆ :**

1. ಸಹಕಾರ ಸಂಘಗಳ ನಿಬಂಧಕರು, #1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052 ಇವರಿಗೆ ಸೂಕ್ತ ಕ್ರಮಕ್ಕಾಗಿ
2. ಸಹಕಾರ ಸಂಘಗಳ ಅಪರ ನಿಬಂಧಕರು(          ) ಕೇಂದ್ರ ಕಚೇರಿ, ಬೆಂಗಳೂರು
3. ಸಹಕಾರ ಸಂಘಗಳ ಜಂಟಿ ನಿಬಂಧಕರು, ............... ಪ್ರಾಂತ, ............
4. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರುಗಳಿಗೆ ಸೂಕ್ತ ಕ್ರಮಕ್ಕಾಗಿ
5. ವ್ಯವಸ್ಥಾಪಕ ನಿರ್ದೇಶಕರು, ರಾಜ್ಯ ಮಟ್ಟದ ಎಲ್ಲಾ ಸಹಕಾರ ಸಂಸ್ಥೆಗಳು
6. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,
7. ವ್ಯವಸ್ಥಾಪಕ ನಿರ್ದೇಶಕರು, ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ
8. ನಿರ್ದೇಶಕರು, ಸಹಕಾರಿ ಲೆಕ್ಕಪರಿಶೋಧನಾ ಇಲಾಖೆ, ಬೆಂಗಳೂರು
9. ಆಯುಕ್ತರು, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು
10. ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ಕೈಮಗ್ಗ ಜವಳಿ ನಿರ್ದೇಶಕರು, ಬೆಂಗಳೂರು
11. ನಿರ್ದೇಶಕರು, ಮೀನುಗಾರಿಕೆ ನಿರ್ದೇಶನಾಲಯ, ಬೆಂಗಳೂರು
12. ನಿರ್ದೇಶಕರು, ರೇಷ್ಮೆ ಇಲಾಖೆ, ಬೆಂಗಳೂರು
13. ಭೂ ಅಭಿವೃದ್ಧಿ ಅಧಿಕಾರಿ (ಸಹಕಾರ), ಕಾಡಾ, .........................

**ಪ್ರತಿಗಳು :**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-01

ಮ:02.